**ದಿಃ-08.04.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿಸವಾಲುಃ ಎದುರುದಾರರ ಪರ ಶ್ರೀ. ವಿ.ಎಸ್ ವಿ ವಕೀಲರಿಂದ ಃ**

28. ಮೂಲ ದಾವಾ ಸಂಖ್ಯೆ 4560/2016 ಸಿಸಿಹೆಚ್-32 ರಲ್ಲಿ ಚಾಲ್ತೆಯಲ್ಲಿದೆ ಎಂದರೆ ಸರಿ. ನಾನು ಆನನ್ನ ಸ್ವತ್ತನ್ನು ಬಿಟ್ಟುಕೊಡುವಂತೆ ಕೇಳಿ ದಾವೆಯನ್ನು ಹೂಡಿರುತ್ತೇನೆ. ಆ ದಾವೆಯಲ್ಲಿ ಮಮತಾರವರು ಆಕೆಯನ್ನು ಪಕ್ಷಗಾರರನ್ನಾಗಿ ಮಾಡುವ ಕುರಿತು ಒಂದು ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿ. ಆ ಅರ್ಜಿಯನ್ನು ದಿನಾಂಕ 04.03.2025 ರಂದು ಆ ನ್ಯಾಯಾಲಯವು ತಿರಸ್ಕರಿಸಿರುತ್ತದೆ.

29. ನನಗೆ ದಿನಾಂಕ 11.02.2012 ರ ಲೀಸ್ ಡೀಡ್ ಬಗ್ಗೆ ಮಾಹಿತಿ ಇದೆ. ಐಟಿಎಂ ಕಾಲೇಜು ಮತ್ತು ಎಲ್ಲಾ ಕುಟುಂಬದ ಸದಸ್ಯರುಗಳ ನಡುವೆ ಈ ಕರಾರು ಪತ್ರ ನಡೆದಿರುತ್ತದೆ. ಅದರ ತಪಸೀಲು ಸರ್ವೆ ನಂ.81/2 ಇ, ಬನ್ನೇರುಘಟ್ಟ ರಸ್ತೆ, ಮೀನಾಕ್ಷಿ ದೇವಸ್ಥಾನದ ಹಿಂದೆ, ಬೆಂಗಳೂರು ಎಂದು ತೋರಿಸಲಾಗಿದೆ. ದಿನಾಂಕ 05.03.1997 ರಂದೂ ಸಹ ಒಂದು ಲೀಸ್ ಡೀಡ್ ಆಗಿತ್ತು ಎಂದರೆ ಸರಿ. ಈ ಕರಾರು ಪತ್ರವೂ ಸಹ ಐಟಿಎಂ ಕಾಲೇಜು ಮತ್ತು ಎಲ್ಲಾ ಕುಟುಂಬದ ಸದಸ್ಯರುಗಳ ನಡುವೆ ನಡೆದಿರುತ್ತದೆ.

30. ದಿನಾಂಕ 20.08.1998 ರಂದು ಒಂದು ಕ್ರಯದ ಕರಾರು ಪತ್ರವಾಗಿರುತ್ತದೆ ಎಂದರೆ ಸರಿ. ಇದು ಐಟಿಎಂ ಕಾಲೇಜು ಮತ್ತು ಎಲ್ಲಾ ಕುಟುಂಬದ ಸದಸ್ಯರುಗಳ ನಡುವೆ ನಡೆದಿರುತ್ತದೆ ಎಂದರೆ ಸರಿ. 2011 ರಲ್ಲಿ ಐಟಿಎಂ ಕಾಲೇಜು ಮತ್ತು ಎಲ್ಲಾ ಕುಟುಂಬದ ಸದಸ್ಯರುಗಳ ನಡುವೆ ಒಂದು ಲೀಸ್ ಅಗ್ರಿಮೆಂಟ್ ಆಗಿತ್ತು ಎಂದರೆ ಸರಿಯಲ್ಲ. ಈ ಬಗ್ಗೆ ಮಾತುಕತೆ ಮಾತ್ರ ಆಗಿತ್ತು ಎಂದು ನುಡಿಯುತ್ತಾರೆ. ಆ ಅಗ್ರಿಮೆಂಟನ್ನು ಮಾಡಬಾರದು ಎಂದು ಈ ದಾವೆಯನ್ನು ಸಲ್ಲಿಸಲಾಗಿದೆ ಎಂದರೆ ಸರಿಯಲ್ಲ. ಅಮಲಜಾರಿ ಅರ್ಜಿ ನಂಃ193/2013 ರಂತೆ ಕೋರ್ಟ್ ಕಮಿಷನರ್ ಮುಖಾಂತರ ನ್ಯಾಯಾಲಯದ ಆದೇಶದಂತೆ ಕ್ರಯ ಪತ್ರ ಮಾಡಲಾಗಿದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದು ನಮ್ಮ ಗಮನಕ್ಕೆ ಬರದೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಈ ಬಗ್ಗೆ ನನಗೆ 2 ವರ್ಷದ ನಂತರ ಗಮನಕ್ಕೆ ಬಂದಿರುತ್ತದೆ. ಅಮಲಜಾರಿ ಅರ್ಜಿ ನಂಃ193/2013 ರಲ್ಲಿ ನಾನು ಒಬ್ಜೆಕ್ಟರ್ ಆಗಿ ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ.

31. ಮೂಲ ದಾವಾ ಸಂಖ್ಯೆ 6019/2005 ರಲ್ಲಿ ಆದ ರಾಜಿ ಡಿಕ್ರಿಯನ್ನು ಇಲ್ಲಿಯವರೆಗೂ ಯಾರೂ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ಅದು ತಿಳಿದ ತಕ್ಷಣ ನಾವು ಪ್ರಕರಣಗಳನ್ನು ಹೂಡಿದ್ದೇವೆ ಎಂದು ನುಡಿಯುತ್ತಾರೆ. ಆ ಮೇಲ್ಮನವಿಯನ್ನು ನನ್ನ ಗಂಡ ಸಲ್ಲಿಸಿರುತ್ತಾರೆ. ಮೂಲ ದಾವಾ ಸಂಖ್ಯೆ 6019/2005 ರಲ್ಲಿ ರಾಜಿ ಬಗ್ಗೆ ಪ್ರಕ್ರಿಯೆ ನಡೆಯುತ್ತಿರುವಾಗ ಆ ಸಂದರ್ಭದಲ್ಲಿ ನಮಗೆ ಗೊತ್ತಿತ್ತು

ಎಂದರೆ ಸರಿಯಲ್ಲ. ಈ ಬಗ್ಗೆ ನಮಗೆ 2011 ನೇ ಇಸವಿಯಲ್ಲಿ ಗೊತ್ತಾಗಿರುತ್ತದೆ. ಆ ದಿನ ನ್ಯಾಯಾಲಯಕ್ಕೆ ಹೋಗಿದ್ದಾಗ ಅಲ್ಲಿ ಏನು ನಡೆಯಿತು ಎಂದು ನನಗೆ ಹೇಳಿರುತ್ತಾರೆ. ನ್ಯಾಯಾಲಯದಲ್ಲಿ ತುಂಬಾ ಪುಟಗಳಿಗೆ ನಾವು ಸಹಿಯನ್ನು ಮಾಡಿರುತ್ತೇವೆ ನಾವು ಹೇಳಿದ್ದು ಅದರಲ್ಲಿ ಬರೆದಿದ್ದಾರೋ ಇಲ್ಲವೋ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆ ದಿನ ರಾಜಿ ಅರ್ಜಿಯನ್ನು 2 ಪಕ್ಷಗಾರರು ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಸಲ್ಲಿಸಿದಾಗ ನ್ಯಾಯಾಧೀಶರು ಆ ರಾಜಿ ಅರ್ಜಿಯಲ್ಲಿ ಬರೆದಿರುವ ವಿಚಾರಗಳನ್ನು ಎಲ್ಲರಿಗೂ ಓದಿ ಹೇಳಿ ಅವರು ಅದನ್ನು ಸರಿ ಇದೆ ಎಂದು ಹೇಳಿ ಒಪ್ಪಿದ ನಂತರ ಆ ರಾಜಿ ಅರ್ಜಿಗೆ ಮತ್ತು ನ್ಯಾಯಾಲಯದ ಆದೇಶದ ಪುಟಗಳಿಗೆ ಸಹಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ರಾಜಿ ಅರ್ಜಿ ಆದ ದಿನವೇ ನಮ್ಮವರಿಗೆ ಅದರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ ಎಂದು ಹೇಳಿ ಗೊತ್ತಾದ ಆ ದಿನವೇ ಪ್ರಕರಣವನ್ನು ದಾಖಲಿಸದೇ ವಿಳಂಬವಾಗಿ ಈಗ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ.

32. ಎದುರುದಾರರು ನಂ.4 ನರಸಪ್ಪ ರೆಡ್ಡಿ, ನಂ.5 ನೀಲಮ್ಮ, ನಂ.6 ಹೆಚ್.ಎಂ.ನಾಗರಾಜು, ನಂ.7 ಆರ್ ಜಯಲಕ್ಷ್ಮಿ, ನಂ.8 ವಿವೇಕ ರೆಡ್ಡಿಯವರು ನ್ಯಾಯಾಲಯಕ್ಕೆ ಹಾಜರಾಗಿಲ್ಲ ಎಂದರೆ ನರಸಪ್ಪ ರೆಡ್ಡಿ ಮತ್ತು ನೀಲಮ್ಮರವರು ಮೃತ ಪಟ್ಟಿರುತ್ತಾರೆ ಮತ್ತು ಉಳಿದವರು ಸುಮಾರು 1999 ರಿಂದ ವಿಭಾಗ ಮಾಡಿಕೊಂಡು ನಮ್ಮಿಂದ ಬೇರೆಯೇ

ಇದ್ದಾರೆ ಎಂದು ನುಡಿಯುತ್ತಾರೆ. ನರಸಪ್ಪ ರೆಡ್ಡಿ ಮತ್ತು ನೀಲಮ್ಮರವರ ಮರಣದ ನಂತರ ನಾನು ಮತ್ತು ನನ್ನ ಗಂಡ ಜಂಟಿಯಾಗಿ ಅವರಿಗೆ ಬರುತ್ತಿರುವ ಬಾಡಿಗೆಯನ್ನು ಪಡೆಯುತ್ತಿದ್ದೇವೆ ಎಂದರೆ ಸರಿಯಲ್ಲ. ಅವರ ಮರಣದ ನಂತರ ಬಾಡಿಗೆಯನ್ನು ನೀಡುತ್ತಿಲ್ಲ ಎಂದು ನುಡಿಯುತ್ತಾರೆ. ನರಸಪ್ಪ ರೆಡ್ಡಿ ನೀಲಮ್ಮ ಮತ್ತು ಹೇಮಚಂದ್ರರವರಿಗೆ ಜಂಟಿ ಖಾತೆಗಳಿದ್ದು ನನ್ನ ಅತ್ತೆ ಮಾವನ ಮರಣದ ನಂತರ ಹೇಮಚಂದ್ರರವರು ಬಾಡಿಗೆಯನ್ನು ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಅವರ ಜಂಟಿ ಖಾತೆ ಇತ್ತು ಆದರೆ ಅವರ ಮರಣದ ನಂತರ ಬಾಡಿಗೆಯನ್ನು ನಿಲ್ಲಿಸಿದ್ದಾರೆ ಎಂದು ನುಡಿಯುತ್ತಾರೆ.

33. ಹೇಮಚಂದ್ರರವರಿಗೆ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಅವರು ನನಗೆ ಜಿಪಿಎಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಗಂಡನನ್ನು ಎಲ್ಲಾ ಪ್ರಕರಣಗಳಲ್ಲಿ ನಾನೇ ಪ್ರತಿನಿಧಿಸುತ್ತಿದ್ದೇನೆ ಎಂದರೆ ಸರಿ. ಪ್ರತಿವಾದಿ ನಂ.4 ರಿಂದ 8 ರವರು ಯಾವುದೇ ಪ್ರಕರಣಗಳಲ್ಲಿ ಹಾಜರಾಗಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಅವರು ರಾಜಿ ಅರ್ಜಿಯನ್ನು ಒಪ್ಪಿಕೊಂಡಿದ್ದರಿಂದಲೇ ಅವರು ಹಾಜರಾಗಿಲ್ಲ ಎಂದರೆ ಸರಿಯಲ್ಲ.

34. ಆಸ್ತಿಯ ಮೌಲ್ಯ ಹೆಚ್ಚಾಗಿದ್ದರಿಂದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಮತ್ತು ಎದುರುದಾರರಿಗೆ ಮೋಸ ಮಾಡುವ ಉದ್ದೇಶದಿಂದ ಮತ್ತು ತೊಂದರೆ ಕೊಡುವ ಉದ್ದೇಶದಿಂದಲೇ ವಿಳಂಬವಾಗಿ ಈ ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಈ ಅರ್ಜಿಯನ್ನು ತಯಾರಿಸುವ ಸಂದರ್ಭದಲ್ಲಿ ನಾನು ಇರಲಿಲ್ಲ ಎಂದರೆ ಸರಿಯಲ್ಲ. ಆ ಸಂದರ್ಭದಲ್ಲಿ ನೀಡಿದ ದಾಖಲೆ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಕರಣವನ್ನು ಹೂಡಿ, ಸುಳ್ಳು ಸಾಕ್ಷ್ಯವನ್ನು ನುಡಿದು ಸುಳ್ಳು ಸಾಧನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಮಮ್ತಾಜ್)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**, ನ್ಯಾಯಾಧೀಶರು, ಬೆಂಗಳೂರು.**